೫) ಕೊಳ್ಳೇಗಾಲ ತಾಲ್ಲೂಕಿನ ರಾಮಪುರ ಹೋಬಳಿಯಲ್ಲಿ ಭೂ ರಹಿತರಿಗೆ ಬಿಡುಗಡೆ ಮಾಡಿದ್ದ ೭೦೦ ಎಕರೆ ಭೂಮಿ ಲಭ್ಯವಾಗದೇ ಇರುವುದರಿಂದ ನೆಲ್ಲೂರು ಬಳಿ ಇರುವ ಭೂಮಿಯ ಮುಜೂರಾತಿ ಬಗ್ಗೆ

ಶ್ರೀ ಜಿ. ರಾಜೂಗೌಡ (ಹನೂರು).—ಮಾನ್ಯ ಅಧ್ಯಕ್ಷರೆ, ಕೊಳ್ಳೇಗಾಲ ತಾಲೂಕಿನ ರಾಮಪುರ ಹೋಬಳಿಯಲ್ಲಿ ಲ್ಯಾಂಡ್‌ಲೆಸ್ ಪೀಪಲ್ ಸೆಟಲ್‌ಮೆಂಟ್ ಏಜೆನ್ಸಿ ಎಂಬ ಸಂಸ್ಥೆಯೊಂದಿದೆ. ಆಲ್ಲಿ ೧೫೦೦ ಎಕರೆ ಭೂಮಿಯು ಮುಜೂರಾಗಿದ್ದಿತು. ಸುಮಾರು ೮೦೦ ಎಕರೆ ಭೂಮಿ ಲಭ್ಯವಾಗಿದೆ. ಅದನ್ನು ೧೯೨ ಭೂ ನೆಲ ಸಿಗದ ಕುಟುಂಬಕ್ಕೆ (ಳಿ) ನಾಲ್ಕು ಎಕರೆ ಭೂಮಿ ಅಧಿಕೃತವಾಗಿಯೂ, ೧೮ ಕುಟುಂಬಗಳು ಅನಧಿಕೃತವಾಗಿಯೂ ಸುಮಾರು ೭೦ ಎಕರೆ ಭೂಮಿಯನ್ನು ೧೯೭೪ರಿಂದಲೂ ವ್ಯವಸಾಯ ಮಾಡಿಕೊಂಡು ಬರುತ್ತಿದ್ದಾರೆ, ಉಳಿದ ೭೦೦ ಎಕರೆ ಭೂಮಿಯನ್ನು ಬಿಡುಗಡೆ ಮಾಡಲು ಅಲ್ಲಿ ಸಣ್ಣಪುಟ್ಟ ಗುಡ್ಡಗಳಿದ್ದುದರಿಂದಲೂ. ಆ ಪ್ರದೇಶದಲ್ಲಿ ಕೇವಲ ವರ್ಷದಲ್ಲಿ ೧೨ ರಿಂದ ೧೫ ಅಂಗುಲ ಮಳೆ ಬೀಳುತ್ತಿದ್ದುದರಿಂದಲೂ, ತಾಲೂಕಿನಲ್ಲಿ ಬೇರೆ ಕಡೆ ಬಿಡುಗಡೆ ಮಾಡುವುವಾಗಿ ಅಂದಿನ ಮೈಸೂರು ವಿಭಾಗಾಧಿಕಾರಿಗಳು ಹೇಳಿದ್ದರು. ಇದುವರೆಗೂ ಅದು ಬಿಡುಗಡೆ ಆಗದಿರುವುದರಿಂದ. ಕೂಡಲೇ ಕೊಕ್ಕನಹಳ್ಳಿ ಹೋಬಳಿ ನೆಲ್ಲೂರು ಬಳಿ ಇರುವ ಭೂಮಿಯಲ್ಲಿ ಯಾವ ವಿಧವಾದ ವಂರಗಿಡಗಳೂ ಇಲ್ಲದೇ ಸಮತಟ್ಟಾಗಿರುವುದರಿಂದ ಅದನ್ನು ಕೂಡಲೇ ಬಿಡುಗಡೆ ಮಾಡ ಬೇಕೆಂತಲೂ ಅನಧಿಕೃತವಾಗಿ ವ್ಯವಸಾಯ ಮಾಡುತ್ತಿರುವ ೧೮ ಕುಟುಂಬಗಳಿಗೆ ಈಗಾಗಲೇ ವಿಶೇಷ ಜಿಲ್ಲಾಧಿಕಾರಿಗಳು ಶಿಫಾರಸು ಮಾಡಿರುವುದರಿಂದ ಅವರಿಗೆ ಪಟ್ಟಾ ಕೊಡಬೇಕೆಂಬುದಾಗಿಯೂ, ಮೂರನೆಯದಾಗಿ ಆ ಕಾಲೋನಿಗಳಿಗೆ ದೀಪದ ವ್ಯವಸ್ಥೆ ಮಾಡಬೇಕಾಗಿಯೂ ಉಳಿದ ೭ ಲಕ್ಷ ರೂಪಾಯಿಗಳನ್ನು ಆ ಜನಗಳಿಗೆ ಸಾರ್ಥಕಪಡಿಸುವಂತೆ ಉಪಯೋಗಿಸಲು ಕೂಡಲೇ ವಿಭಾಗಾಧಿಕಾರಿಗಳ ಸಂಬಂಧಪಟ್ಟ ಸಮಿತಿಯನ್ನು ಕರೆಯಬೇಕೆಂತಲೂ ಕಂದಾಯ ಮಂತ್ರಿಗಳು ಆದೇಶ ಕೊಡಬೇಕೆಂದು ಛಿನ್ನೈಸಿಕೊಳ್ಳುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್ (ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು).—ಮಾನ್ಯ ಅಧ್ಯಕ್ಷರೇ ಈಗತಾನೆ ಮಾನ್ಯ ಕಂದಾಯ ಮಂತ್ರಿಗಳು ಉತ್ತರವನ್ನು ಕೊಟ್ಟಿದ್ದಾರೆ. ಆದರ ಬಗ್ಗೆ ಪ್ರಸ್ತಾಪ ನಡೆದಿದೆ ಮಾನ್ಯ ಸದಸ್ಯರು ಹೇಳಿದ ವಿಚಾರವನ್ನು ಗಮನದಲ್ಲಿಟ್ಟು ಕೊಂಡು ತೊಂದರೆಯಾಗದ ರೀತಿಯಲ್ಲಿ ಕ್ರಮ ತೆಗೆದುಕೊಳ್ಳುತ್ತೇವೆ.

೬) ಕೃಷಿ ವಿಶ್ವವಿದ್ಯಾನಿಲಯಗಳಲ್ಲಿ ಹುದ್ದೆಗಳನ್ನು ತುಂಬುವಾಗ ಮೀಸಲಾತಿ ನಿಯಮವನ್ನು ಸರಿಯಾಗಿ ಪಾಲಿಸದೆ ಇರುವುದರ ಬಗ್ಗೆ

ಶ್ರೀ ಡಿ. ಬಿ. ಚಿನ್ನಪ್ಪ.—ಮಾನ್ಯ ಅಧ್ಯಕ್ಷರೆ ಸರಕಾರದಲ್ಲಾಗಲೀ ಅಥವಾ ವಿಶ್ವವಿದ್ಯಾನಿಲಯಗಳಲ್ಲಾಗಲೀ ಅಥವಾ ಅರೆ ಸರಕಾರಿ ಸಂಸ್ಥೆಗಳಲ್ಲಾಗಲೀ ಪರಿಶಿಷ್ಟಜಾತಿ ಹಾಗೂ ವರ್ಗಗಳವರಿಗೆ ನಿರ್ದಿಷ್ಟ ಸ್ಥಾನಗಳನ್ನು ಮೀಸಲಿಡಲಾಗಿದೆ. ಈ ಹುದ್ದೆಗಳನ್ನು ತುಂಬುವ ಬಗ್ಗೆ ನಿಯಮಗಳನ್ನು ಅನುಸರಿಸದಿರುವಂತಹ ಪ್ರಕರಣಗಳು ಆಗಿಂದಾಗ್ಗೆ ಮರುಕಳಿಸುತ್ತಿರುತ್ತವೆ. ಇಂತಹ ಒಂದು ಪ್ರಕರಣ ಇತ್ತೀಚೆಗೆ ಕೃಷಿ ವಿಶ್ವವಿದ್ಯಾಲಯದಲ್ಲಿ ನಡೆದಿದೆ. ಮೀಸಲು ಹುದ್ದೆಗಳನ್ನು ತುಂಬಲು ಅಭ್ಯರ್ಥಿಗಳನ್ನು ಕರೆದ ಸಂದರ್ಭದಲ್ಲಿ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ವರ್ಗಗಳ ಅಭ್ಯರ್ಥಿಗಳು ದೊರೆಯದಿದ್ದ ಸಂದರ್ಭಗಳಲ್ಲಿ. ಸದರಿ ಹುದ್ದೆಗಳಿಗೆ ಮತ್ತೆರಡು ಬಾರಿ ಅಭ್ಯರ್ಥಿಗಳನ್ನು ಕರೆದು ಆಗಲೂ ಬಾರದಿದ್ದ ಪಕ್ಷದಲ್ಲಿ ಎಂದರೆ ಮೂರು ಬಾರಿ ಅಭ್ಯರ್ಥಿಗಳನ್ನು ಕರೆದಿದ್ದಾಗ್ಯೂ ಅಂತಹ ಅಭ್ಯರ್ಥಿಗಳು ದೊರೆಯದಿದ್ದ ಪಕ್ಷದಲ್ಲಿ ಸದರಿ ಮೀಸಲು ಹುದ್ದೆಗಳನ್ನು ಸಾಮಾನ್ಯ ಹುದ್ದೆಗಳೆಂದು ಪರಿಗಣಿಸಿ ಅವುಗಳನ್ನು ತುಂಬಿಕೊಳ್ಳಲಾಗಿದೆ. ಆದರೆ ಈಗ ಕೃಷಿ ವಿಶ್ವವಿದ್ಯಾಲಯದಲ್ಲಿ ಆ ರೀತಿ ಮಾಡದೆ ಒಂದೇ ಬಾರಿ ಕರೆದ ನೇಮಕದ ಮೀಸಲು ಹುದ್ದೆಗಳನ್ನು ಸಾಮಾನ್ಯ ಹುದ್ದೆಗಳಾಗಿ ಪರಿವರ್ತಿಸಿ ಹುದ್ದೆಗಳನ್ನು ತುಂಬಿರುವ ಪರಿಣಾಮದಿಂದ ಪರಿಶಿಷ್ಟ ಜಾತಿ ಹಾಗೂ ವರ್ಗಗಳವರಿಗೆ ಅನ್ಯಾಯ ಮುಂದಿದ್ದಾರೆ. ಆದ್ದರಿಂದ ಈ ಬಗ್ಗೆ ಸರಕಾರ ಸೂಕ್ತ ಕ್ರಮ ಕೈಕೊಂಡು ಪರಿಶಿಷ್ಟಜಾತಿ ಹಾಗೂ ವರ್ಗದವರಿಗೆ ಆಗಿರುವ ಅನ್ಯಾಯಗಳನ್ನು ಸರಿಪಡಿಸಬೇಕೆಂದು ಸರಕಾರವನ್ನು ಒತ್ತಾಯಿಸುತ್ತೇನೆ.